ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಈ ವರ್ಷ ಜಿಲ್ಲಾ ಪರಿಷತ್ತಿನವ ಆರೋಗ್ಯ ಕಾರ್ಯಕ್ರಮಗಳ ಅನುದಾನದಲ್ಲಿ ಕೆಲವು ಅಂಬ್ಯುಲೆನ್ಸ್ ಖರೀದಿ ಮಾಡುವ ವಿಚಾರ ಇದೆ. ಆದರೆ ಇದಕ್ಕೆ ಆರ್ಥಿಕ ಇಲಾಖೆಯ ಒಪ್ಪಿಗೆ ಬೇಕಾಗಿದೆ. ಆರ್ಥಿಕ ಇಲಾಖೆಯವರು ಒಪ್ಪಿಗೆ ಕೊಟ್ಟು ತಕ್ಷಣ ಇವುಗಳ ಖರೀದಿಗೆ ಪರಿಶೀಲನೆ ಮಾಡಲಾಗುತ್ತದೆ.

೧–೦೫ ಪಿ.ಎಂ.

(viii) ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಕಟ್ಟುವ ಬಗೆ

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ೧೯೮೩ ರಿಂದ ಪ್ರಥಮ ದರ್ಜೆ ಕಾಲೇಜನ್ನು ಸರ್ಕಾರದವರು ಪ್ರಾರಂಭ ಮಾಡಿದ್ದು ಇವತ್ತಿಗೆ ಕಟ್ಟಡವಿಲ್ಲದೆ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ತೊಂದರೆಗೀಡಾಗಿದ್ದು ಇದರ ಬಗ್ಗೆ ಅನೇಕ ಭಾರಿ ಸರ್ಕಾರಕ್ಕೆ ತ್ವರಿತವಾಗಿ ಕಟ್ಟಡ ಒದಗಿಸಿಕೊಡಬೇಕೆಂದು ತಗಾದೆ ಮಾಡುತ್ತಿದ್ದರೂ ಯಾವ ಕ್ರಮ ತೆಗೆದುಕೊಂಡಿಲ್ಲ ದಿರುವುದರಿಂದ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಆಗಿರುವ ತೊಂದರೆ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಯವರ ಗಮನ ಸೆಳೆಯುಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಓದುತ್ತೇನೆ.

ಗುಬ್ಬಿ ನಗರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ೧೯೮೩–೮೪ನೇ ಸಾಲಿನಲ್ಲಿ ಮಂಜೂರು ಮಾಡಲಾಯಿತು. ಸದರೀ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇದ್ದ ಕಾರಣ ಗುಬ್ಬಿಯಲ್ಲಿನ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢ ಶಾಲೆಯಲ್ಲಿ ಕಾಲೇಜನ್ನು ನಡೆಸಲಾಗುತ್ತಿದೆ. ೧೯೮೯–೯೦ನೇ ಸಾಲಿನಲ್ಲಿ ೨೮೦ ವಿದ್ಯಾರ್ಥಿಗಳು ಇದ್ದರು ೧೯೯೦–೯೧ನೇ ಸಾಲಿಗೆ ದಾಖಲಾತಿ ಇನ್ನು ನಡೆಯುತ್ತಿದೆ. ಈ ಕಾಲೇಜಿನಲ್ಲಿ ಕಲಾ ವಿಭಾಗ ಮಾತ್ರ ನಡೆಯುತ್ತಿದೆ.

ಕಾಲೇಜಿಗೆ ಕಟ್ಟಡ ಕಟ್ಟಿಸಲು ಬೇಕಾದ ನಿವೇಶನವನ್ನು ದೊರಕಿಸಲು ಪ್ರಯತ್ನವನ್ನು ಮಾಡ ಲಾಗುತ್ತಿದೆ. ಗುಬ್ಬಿ ಗ್ರಾಮದ ಸರ್ವೆ ನಂಬರ್ ೪೩ ಮತ್ತು ೪೬ರಲ್ಲಿ ಒಟ್ಟು ೧೯ ಎಕರೆ ೩೧ ಗುಂಟೆ ಖಾಸಗೀ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ವ್ಯವಹಾರ ನಡೆಯುತ್ತಿದೆ. ಈಗಾಗಲೇ ಇದರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲರ ಪ್ರಕಾರ ಆಕ್ಷೇಪಣೆಗಳು ಬಂದಿರುತ್ತವೆ. ೬-೪-೧೯೯೦ರಂದು ಉಪ ವಿಭಾಗಾಧಿಕಾರಿಗಳು ಮೊದಲನೇ ವಿಚಾರಣಾ ಸಭೆಯನ್ನು ನಡೆಸಿರುತ್ತಾರೆ. ಈ ಸಭೆಯಲ್ಲಿ ಅಂತಿಮ ತೀರ್ಮಾನವನ್ನು ಅನೇಕ ಕಾರಣಗಳಿಂದ ತೆಗೆದುಕೊಳ್ಳಲಾಗಿದೆ. ಸ್ಥಳ ವೀಕ್ಷಣೆ ಮಾಡಿ ಅಂತಿಮ ತೀರ್ಮಾನ ಮಾಡುತ್ತೇವೆಂದು ನಿರ್ಧಾರ ತೆಗೆದುಕೊಂಡಿರುತ್ತಾರೆ. ಅವರಿಂದ ಅಂತಿಮ ವರದಿಯನ್ನು ಕಾಯಲಾಗಿದೆ.

ಊರಿನ ನಾಗರೀಕರು ಕಟ್ಟಡದ ನಿರ್ಮಾಣದ ಸಲುವಾಗಿ ಒಂದು ಲಕ್ಷ ರೂಗಳ ವಂತಿಗೆ ನೀಡಿದ್ದು ಖಜಾನೆಯಲ್ಲಿ ಜಮಾವಾಗಿದೆ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಅಡಿಗೆಯವರನ್ನು ಮತ್ತು ಸೂಪರ್ ವೈಸರುಗಳ ನೇಮಕ

ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗಾಗಿ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಅಡಿಗೆಯವರನ್ನು ಮತ್ತು ಇತರ ಸಿಬ್ಬಂದಿ ವರ್ಗ ದವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ

ಶ್ರೀ ಎಸ್.ಎಂ.ಯಾಹ್ಯಾ.—(ಕೈಗಾರಿಕಾ ಸಚಿವರು).—ಈ ವಿಷಯವನ್ನು ಸರ್ಕಾರದ ಗಮನಕ್ಕೆ ತೆಗೆದುಕೊಳ್ಳಲಾಗಿದೆ.